ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **7649/2022**

ಚಾಸಾಃ 1
ಫ್ರಾಸಾಃ 1

ದಿನಾಂಕಃ **06-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಗಂಗಾಧರ |
| ತಂದೆಯ/ಗಂಡನ ಹೆಸರು | : | ಕೆಂಪಯ್ಯ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಹಾಲ್ಕುರಿಕೆ |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿರುತ್ತಾರೆ. ಅವರ ಪರಿಚಯ ಇರುವುದಿಲ್ಲ. ಚಾಸಾ-2 ರಿಂದ 4 ರವರ ಪರಿಚಯ ನನಗೆ ಇದೆ.

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಪೊಲೀಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಒಂದು ಸಹಿಯನ್ನು ಹಾಕಿರುತ್ತೇನೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ದೂರು ಆಗಿದ್ದು ಅದನ್ನು ನಿಪಿ-1 ಎಂದು ಅದರಲ್ಲಿನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ದಾಖಲಾತಿ ತೋರಿಸಿದ್ದು ಅದು ಮಹಜರ್ ಆಗಿದ್ದು ಅದನ್ನು ನಿಪಿ-2 ಎಂದು ಅದರಲ್ಲಿನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಗಿರುತ್ತದೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಅದರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಸಹಿಗಳನ್ನು ನಾನು ಪೊಲೀಸ್ ಠಾಣೆಯಲ್ಲಿ 2 ವರ್ಷಗಳ ಹಿಂದೆ ಮಾಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ **17-03-2022** ರಂದು ರಾತ್ರಿ **11-45** ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಚಾಸಾ-**2** ರವರು ನನಗೆ ಫೋನ್ ಮಾಡಿ ನಾನು ಮತ್ತು ನಿಮ್ಮ ಚಿಕ್ಕಪ್ಪನ ಮಗ ಲೋಕೇಶ್ ಇಬ್ಬರೂ ನನ್ನ ಬಾಬ್ತು ಕೆಎ-**02**-ಜೆಎಫ್-**6631** ಆಕ್ಟೀವ್ ಹೋಂಡಾದಲ್ಲಿ ನೊಣವಿನಕೆರೆಯಿಂದ ಆಲ್ಬೂರ್ ಕಡೆಗೆ ಬೈಕನ್ನು ಲೋಕೇಶ್ ಓಡಿಸುತ್ತಿದ್ದು ನಾನು ಹಿಂದೆ ಕುಳಿತಿದ್ದಾಗ ರಂಗನಹಳ್ಳಿ ಗೇಟ್ ನಿಂದ ಸ್ವಲ್ಪ ಮುಂದೆ ವೈಟಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಎದುರುಗಡೆಯಿಂದ ಕೆಎ-**02**-ಎಂಕ್ಯೂ-**2715** ಕಾರಿನ ಡ್ರೈವರ್ ತನ್ನ ಕಾರನ್ನು ಅತೀವೇಗವಾಗಿ ನಿರ್ಲಕ್ಷತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಢಿಕ್ಕಿ ಹೊಡೆಸಿ ಅಪಘಾತ ಪಡಿಸಿದನು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಬೈಕ್ ಸಮೇತ ಕೆಳಗಡೆ ಬಿದ್ದಾಗ ಲೋಕೇಶ್ ತಲೆಗೆ ಬಲವಾದ ಪೆಟ್ಟು ಬಿದ್ದು ರಕ್ತಸ್ರಾವ ಆಗಿರುತ್ತದೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-**2** ರವರಿಗೆ ತರಚಿದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-**3** ರವರು ಸ್ಥಳಕ್ಕೆ ಹೋಗಿ ನೋಡಿದಾಗ ಲೋಕೇಶ್ ಒದ್ದಾಡುತ್ತಿದ್ದ ಸ್ಥಳದಲ್ಲಿ ಚಾಸಾ-**4** ರವರು ಇದ್ದರು ಎಂದರೆ ಸರಿಯಲ್ಲ. ತಕ್ಷಣ ನಾನು ಆಂಬುಲೆನ್ಸ್ ಗೆ ಫೋನ್ ಮಾಡಿ ಕರೆಸಿಕೊಂಡು ತಿಪಟೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಲೋಕೇಶನು ತೀರಿಕೊಂಡರು ಎಂದರೆ ಸರಿಯಲ್ಲ. ಸದರಿ ಘಟನೆ ಬಗ್ಗೆ ಚಾಸಾ-**4** ರವರು ಆರೋಪಿಯ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಅಪಘಾತವು ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ಮಾಹಿತಿ ನನಗೆ ಇರುವುದಿಲ್ಲ. ನಿಪಿ-**1** ರಂತೆ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿಃ **19-03-2022** ರಂದು ಚಾಸಾ-**16** ರವರು ನೊಣವಿನಕೆರೆ ಗ್ರಾಮದ ಚಾಸಾ-**4** ರವರ ಮನೆಯ ಮುಂಭಾಗ ಹಾದು ಹೋಗಿರುವ ತಿಪಟೂರು ಎಡೆಯೂರು ರಸ್ತೆಯಲ್ಲಿ ಸ್ಥಳ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಸ್ಥಳ ಪಂಚನಾಮೆಯನ್ನು ಸಂಜೆ **4-30** ರಿಂದ **5-30** ಗಂಟೆರೆವರೆಗೆ ನನ್ನ ಹಾಗೂ ಚಾಸಾ-**5** ಮತ್ತು **6** ರವರ ಸಮಕ್ಷಮದಲ್ಲಿ ನಿಪಿ-**2** ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **7649/2022**

ಚಾಸಾಃ 3
ಫ್ರಾಸಾಃ 2

ದಿನಾಂಕಃ **06-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಬಸವರಾಜು |
| ತಂದೆಯ/ಗಂಡನ ಹೆಸರು | : | ರಾಮಯ್ಯ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಆಲ್ಬೂರು |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿರುತ್ತಾರೆ. ಅವರ ಪರಿಚಯ ನನಗೆ ಇರುವುದಿಲ್ಲ.

ಚಾಸಾ-1 ಮತ್ತು 2 ಹಾಗೂ 4 ರವರ ಪರಿಚಯ ನನಗೆ ಇದೆ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಯಾವುದೇ ಅಪಘಾತವನ್ನು ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ 17-03-2022 ರಂದು ರಾತ್ರಿ ಊಟ ಮಾಡಿ ಮನೆಯಲ್ಲಿ ಮಲಗಿಕೊಂಡಿರುವಾಗ ಚಾಸ-1 ರವರು ನನಗೆ ಕರೆ ಮಾಡಿ ಲೋಕೇಶ್ ಮತ್ತು ನಮ್ಮೂರಿನ ಕುಮಾರ್ ಸ್ವಾ ಮಿ ರವರ ಮಗ ಮೋಹನ್ ಕುಮಾರ್ ರವರು ಇಬ್ಬರೂ ನನ್ನ ಬಾಬ್ತು ಕೆಎ-02-ಜೆಎಫ್-6631 ಆಕ್ಟೀವ್

ಹೋಂಡಾದಲ್ಲಿ ನೊಣವಿನಕೆರೆಗೆ ಹೋಗಿ ವಾಪಾಸ್ಸು ರಾತ್ರಿ 11-30 ಗಂಟೆ ಸಮಯದಲ್ಲಿ ಆಲ್ಬೂರ್ ಗೆ ಬರಲು ತಿಪಟೂರು -ಎಡೆಯೂರು ರಸ್ತೆಯಲ್ಲಿ ರಂಗನಹಳ್ಳಿ ಗೇಟ್ ಸಮೀಪ ಬರುತ್ತಿರುವಾಗ ತುರುವೇಕೆರೆ ಕಡೆಯಿಂದ ಕೆಎ-02-ಎಂಕ್ಯೂ-2715 ಕಾರಿನ ಡ್ರೈವರ್ ತನ್ನ ಕಾರನ್ನು ಅತೀವೇಗವಾಗಿ ನಿರ್ಲಕ್ಷತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಢಿಕ್ಕಿ ಹೊಡೆಸಿ ಅಪಘಾತ ಪಡಿಸಿದನು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಬೈಕ್ ಸಮೇತ ಕೆಳಗಡೆ ಬಿದ್ದಾಗ ಲೋಕೇಶ್ ತಲೆಗೆ ಬಲವಾದ ಪೆಟ್ಟು ಬಿದ್ದು ರಕ್ತಸ್ರಾವ ಆಗಿರುತ್ತದೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ತರಚಿದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಲೋಕೇಶ್ ಒದ್ದಾಡುತ್ತಿದ್ದ ಸ್ಥಳದಲ್ಲಿ ಚಾಸಾ-4 ರವರು ಇದ್ದರು ಎಂದರೆ ಸರಿಯಲ್ಲ. ತಕ್ಷಣ ಚಾಸಾ-1 ರವರು ಆಂಬುಲೆನ್ಸ್ ಗೆ ಪೋನ್ ಮಾಡಿ ಕರೆಸಿಕೊಂಡು ತಿಪಟೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಲೋಕೇಶನು ತೀರಿಕೊಂಡರು ಎಂದರೆ ಸರಿಯಲ್ಲ. ಸದರಿ ಘಟನೆ ಬಗ್ಗೆ ಚಾಸಾ-4 ರವರು ಆರೋಪಿಯ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಅಪಘಾತವು ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ಮಾಹಿತಿ ನನಗೆ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿರುವುದಿಲ್ಲ ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.